ಓ ಎಸ್ಃ 301/2017

ಪಿ ಡಬ್ಲ್ಯೂ ಃ 1

ದಿನಾಂಕಃ08.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ 6 ರವರ ಶ್ರೀ ಎಸ್ ಜಿ ಆರ್ ವಕೀಲರಿಂದಃ**

ನಿ ಪಿ 41 ನ್ನು ಯಾವ ಉದ್ದೇಶಕ್ಕೆ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ನಮ್ಮ ಚಿಕ್ಕಪ್ಪಂದಿರ ನಡುವೆ ಭಾಗ ಆಗಿರುವುದನ್ನು ತೋರಿಸಲು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಿ ಪಿ 41 ಕ್ಕೂ ಈ ದಾವೆಗೂ ಸಂಬಂದ ಇರುವುದಿಲ್ಲ. ನಿ ಪಿ 42 ಕೂಡ ಈ ದಾವೆಗೂ ಸಂಬಂಧ ಇರುವುದಿಲ್ಲ. ನಿ ಪಿ 41 ರಲ್ಲಿ ತೋರಿಸಿರುವ ಸ.ನಂ. 23/08ರಲ್ಲಿ 26 ಗುಂಟೆ ನಮ್ಮ ಚಿಕ್ಕಪ್ಪ ಚಿಕ್ಕಚೌಡಯ್ಯ ಬಿನ್ ನಂಜಪ್ಪ ರವರ ಹೆಸರಿಗೆ ಇದ್ದು, ಪೌತಿ ಖಾತೆಯಂತೆ ಅವರ ಮಗ ನಂಜಪ್ಪ ಬಿನ್ ಚಿಕ್ಕಚೌಡಯ್ಯ ರವರ ಹೆಸರಿಗೆ ಆಗಿದ್ದು, ನಾವು ಆ ಜಮೀನನ್ನು ಸೇರಿಸಿ ಐಟಂ ನಂಬರ್ 2 ರಂತೆ 1 ಎಕರೆ 7 ಗುಂಟೆ ಜಮೀನಿನ ಮೇಲೆ ದಾವೆಯನ್ನು ಹೂಡಿರುತ್ತೇವೆ ಎಂದರೆ ಸರಿ.

ಸ.ನಂ. 30/2 ನನ್ನ ಚಿಕ್ಕಪ್ಪನ ಹೆಸರಿನಲ್ಲಿ ಇದ್ದು, ಅದು ಈ ದಾವೆಯ 4ನೆ ಐಟಂ ಸ್ವತ್ತಾಗಿರುತ್ತದೆ ಎಂದರೆ ಸರಿಯ**ಲ್ಲ.** ನಿ ಪಿ 16 ರ ಪ್ರಕಾರ ಐಟಂ ನಂಬರ್ 4 ರ ವಿಸ್ತೀರ್ಣ 1 ಗುಂಟೆ ಇರುತ್ತದೆ ಎಂದರೆ ಸರಿ. ವಿಸ್ತೀರ್ಣ ದಲ್ಲಿ ನಮ್ಮ ಚಿಕ್ಕಪ್ಪ ಚಿಕ್ಕಚೌಡಯ್ಯ ನವರ ಜಮೀನನ್ನು ಸೇರಿಸಿಕೊಂಡು ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ. ಸ.ನಂ. 113/15 ರಲ್ಲಿ 28 ಗುಂಟೆ ನಮ್ಮ ತಂದೆಯ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಇರುತ್ತದೆ. ನಿಪಿ 4 ರಲ್ಲಿ ಸದರಿ ಸ.ನಂ. 113/15 ರಲ್ಲಿ 28 ಗುಂಟೆ ಇರುವುದಿಲ್ಲ ಎಂದು ದಾಖಲಾತಿಯನ್ನು ಸಾಕ್ಷಿಗೆ ತೋರಿಸಿ ಕೇಳಿದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಚಿಕ್ಕಪ್ಪನ ವಿಸ್ತೀರ್ಣ ಮತ್ತು ಅಕ್ಕ ಪಕ್ಕದವರ ವಿಸ್ತೀರ್ಣವನ್ನು ಸೇರಿಸಿ ನಾನು ದಾವೆಯನ್ನು ಹೂಡಿರುತ್ತೇನೆ ಎಂದರೆ ಸುಳ್ಳು.

ಸ.ನಂ. 113/15 ರಲ್ಲಿ 28 ಗುಂಟೆನನ್ನ ತಂದೆಯ ಹೆಸರಿನಲ್ಲಿ ಇರುತ್ತದೆ ಎಂದು ತೋರಿಸಲು ನಿ ಪಿ 4 ನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಯಾವುದೆ ದಾಖಲಾತಿಗಳನ್ನು ಹಾಜರು ಮಾಡಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಸ.ನಂ. 113/15 ರಲ್ಲಿ 28 ಗುಂಟೆ ಜಮೀನು ಇರುತ್ತದೆ ಎಂದು ತೋರಿಸಲು ನನ್ನ ಹತ್ತಿರ ಯಾವುದೇ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿ. ನಿಪಿ 3 ರಲ್ಲಿ ಸ.ನಂ. 32/13 ರಲ್ಲಿ 1 ಎಕರೆ 18 ಗುಂಟೆ ನನ್ನ ತಂದೆಯ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿ ನನ್ನ ತಂದೆ ಮತ್ತು ತಾಯಿಯ ಇಬ್ಬರ ಹೆಸರಿನಲ್ಲಿರುತ್ತದೆ ಎಂದು ನುಡಿಯುತ್ತಾರೆ. ನಿ ಪಿ 3 ರಲ್ಲಿ ನನ್ನ ತಂದೆ ತಾಯಿಯ ಹೆಸರಿನಲ್ಲಿ 1 ಎಕರೆ 18 ಗುಂಟೆ ಜಮೀನು ತೋರಿಸಲಾಗಿರುವುದಿಲ್ಲ.

ನನ್ನ ಚಿಕ್ಕಪ್ಪ ಚಿಕ್ಕಚೌಡಯ್ಯ ಬಿನ್ ನಂಜಪ್ಪ ರವರ ಆಸ್ತಿಯನ್ನು ಸೇರಿಸಿದ್ದು, ಅವರ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

ನನ್ನ ತಂದೆ ಮತ್ತು ನನ್ನ ಅಣ್ಣ ತಮ್ಮಂದಿರು ದಿನಾಂಕ ಃ 24.03.1977 ರಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ ಮತ್ತು ಅದಕ್ಕೆ ಆಧಾರವಾಗಿ ಪಂಚಾಯಿತ್ ಪಾರಿಕತ್ ಆಗಿರುತ್ತದೆ ಎಂದರೆ ಸುಳ್ಳು. ದಿನಾಂಕ ಃ 24.03.1977 ರಲ್ಲಿ ಆಗಿರುವ ಪಂಚಾಯಿತ್ ಪಾರಿಕತ್ ನಂತೆ ನನ್ನ ಅಣ್ಣ ತಮ್ಮಂದಿರು , ನನ್ನ ತಂದೆ ಮತ್ತು ನನ್ನ ತಂದೆಯ ದೊಡ್ಡ ಹೆಂಡತಿ ಮತ್ತು ಅವರ ಮಕ್ಕಳು ಪ್ರತ್ಯೇಕವಾಗಿ ಭಾಗ ಮಾಡಿಕೊಂಡು ಸ್ವಾಧೀನ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿ ಸದರಿ ಪಂಚಾಯಿತ್ ಪಾರಿಕತ್ ಆದ ದಿನಾಂಕದಂದು ನಾನು ಬೇರೆ ಮನೆಯಲ್ಲಿದ್ದೆ , ಏನು ದಾಖಲಾತಿಗಳನ್ನು ಮಾಡಿಕೊಂಡಿರುತ್ತಾರೋ ನನಗೆ ಗೊತ್ತಿಲ್ಲ.

ಈ ದಾವೆಯನ್ನು ಹೂಡುವ ಮುಂಚೆ ವಕೀಲರಿಂದ ನೋಟೀಸ್ ನೀಡಿ ಭಾಗ ಕೇಳಿರುತ್ತೀನಾ ಎಂದರೆ ನಾನು ಯಾವುದೇ ನೋಟೀಸ್ ನ್ನು ನೀಡಿರುವುದಿಲ್ಲ ಮತ್ತು ಭಾಗ ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಪ್ರತಿವಾದಿಗಳನ್ನು ಕೂಡಿಸಿ ಭಾಗ ಕೇಳಿರುವುದಿಲ್ಲ ಎಂದರೆ ಕೇಳಿರುತ್ತೇನೆ. ನಾನು ಯಾವುದೇ ಭಾಗ ಕೇಳಿರುವುದಿಲ್ಲ, ಯಾವುದೇ ಪಂಚಾಯಿತಿ ಮಾಡಿಸಿರುವುದಿಲ್ಲ ಮತ್ತು ದಿನಾಂಕ ಃ 24.03.1977 ರಂದು ಆಗಿರುವ ಭಾಗದ ಬಗ್ಗೆ ನನಗೆ ಗೊತ್ತಿದ್ದರೂ ನಾನು ಭಾಗ ಬೇಕೆಂದು ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಎಡಗೈ ಹಸ್ತದ ಮೇಲೆ ನಾನು ಸ.ನಂ. ಗಳು , ಭಾಗಪಟ್ಟಿ ಮತ್ತು ದಿನಾಂಕವನ್ನು ಬರೆದುಕೊಂಡಿದ್ದು, ಅದನ್ನು ನೋಡಿ ಸಾಕ್ಷಿ ನುಡಿಯುಯುತ್ತಿದ್ದೇನೆ ಎಂದರೆ ಸರಿ. ಸದರಿ ಹಸ್ತದಲ್ಲಿ ಬರವಣಿಗೆ ಇರುತ್ತದೆ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**